ದೂರವಾಣಿ ಸಂಖ್ಯೆ: 080-22245073
ಫ್ಯಾಕ್ಸ್ ನಂ: 080 - 22291334

ಇ-ಮೇಲ್:-financialadviser.arkptcl@gmail.com
ವೆಬ್‌ಸೈಟ್: www.kptcl.karnataka.gov.in

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number(CIN):U40109KA1999SGC025521**
ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು -560009.

ಸಂಖ್ಯೆ: ಕವಿಪ್ರನಿನಿ/ಕೆಸಿಓ-19/28964/21-22 16665 ದಿನಾಂಕ: 10 FEB 2022
ಲಗತ್ತು :

EE (IT)
EE (IT)-1
EE (IT) (NW&DC)
EE (MIS)
DCA (IT)
SEE (IT & MIS)
KPTCL

**ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುತ್),**
**ಪ್ರಸರಣ ವಲಯ, ಕವಿಪ್ರನಿನಿ,**
**ಬೆಂಗಳೂರು/ಮೈಸೂರು/ಬಾಗಲಕೋಟೆ,**
**ಕಲಬುರ್ಗಿ/ತುಮಕೂರು/ಹಾಸನ.**

ಮಾನ್ಯರೇ,

**ವಿಷಯ: ಕವಿಪ್ರನಿನಿಯ ಆಸ್ತಿಗಳನ್ನು ವಿಳಂಬವಾಗಿ ಬಂಡವಾಳೀಕರಣಗೊಳಸುತ್ತಿರುವ ಬಗ್ಗೆ.**

ಉಲ್ಲೇಖ:
1. ಆ.ಸ(ಲೆ&ಸಂ)/ನಿ(ಲೆಪಿಂ&ಮುಂ)/ಸಲೆ-1/ಸಿವೈಎಸ್-29 ದಿನಾಂಕ: 21.06.2007
2. ಆ.ಸ(ಲೆ&ಸಂ)/ಕೆಸಿಓ-21/6936/07-08 ದಿನಾಂಕ: 03.02.2009.
3. ಕವಿಪ್ರನಿನಿ/ಬಿ19/345/85-86 ದಿನಾಂಕ: 30.11.2019.
4. ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ದಿನಾಂಕ: 23.11.2021.
5. ಕವಿಪ್ರನಿನಿ/ಕೆಸಿಓ-18/28938/2021-22 ದಿನಾಂಕ: 29.01.2022.

******

ಶಾಸನಬದ್ಧ ಲೆಕ್ಕಪರಿಶೋಧಕರು ಹಾಗೂ ಮಹಾಲೇಖಪಾಲರು ಆರ್ಥಿಕ ವರ್ಷ 2020-21ನೇ ಸಾಲಿನ ಕವಿಪ್ರನಿನಿಯ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ನೀಡಿರುವ ವರದಿಗಳಲ್ಲಿ ಕವಿಪ್ರನಿನಿಯು ಆಸ್ತಿಗಳ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹಾ ಬಂಡವಾಳೀಕರಿಸದೇ ಇರುವುದು ಹಾಗೂ ಬಂಡವಾಳೀಕರಿಸಿದ ನಂತರವೂ ಗುತ್ತಿಗೆದಾರರ ಬಿಲ್ಲುಗಳನ್ನು ಸ್ವೀಕರಿಸಿ ಹಿಂದಿನ ವರ್ಷಗಳ ಆಸ್ತಿಗಳನ್ನು ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಿಸುತ್ತಿರುವುದನ್ನು ತೀರ್ವವಾಗಿ ಆಕ್ಷೇಪಿಸಿರುತ್ತಾರೆ.

1. ಸದರಿ ವಿಷಯವನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಆಸ್ತಿ ವಿಳಂಬವಾಗಿ ಬಂಡವಾಳೀಕರಿಸಲು ಕಾರಣವಾಗಿರುತ್ತದೆ.

   ಅ. ಕಾಮಗಾರಿಗಳು ಪೂರ್ಣಗೊಂಡ ನಂತರವೂ ತಾಂತ್ರಿಕ ಶಾಖೆಯವರು ಗುತ್ತಿಗೆದಾರರಿಂದ ಕಾಮಗಾರಿ ಪೂರ್ಣಗೊಳಸಲು ಸಂಬಂಧಿಸಿದ ಬಿಲ್ಲುಗಳನ್ನು ಪಡೆಯದೇ ಅಥವಾ ನಿಗದಿತ ಸಮಯದೊಳಗೆ ಆಯಾ ಲೆಕ್ಕಶಾಖೆಗೆ ಒದಗಿಸದೇ ಇರುವುದರಿಂದ ಆಸ್ತಿ ಬಂಡವಾಳೀಕರಣವು ವಿಳಂಬವಾಗುತ್ತಿರುವುದು ಕಂಡುಬಂದಿರುತ್ತದೆ.

   ಆ. ಯೋಜನೆಗಳು ಕಾರ್ಯಗತಗೊಂಡ ನಂತರವು ತಾಂತ್ರಿಕ ವರ್ಗದವರಿಂದ ಕಾಮಗಾರಿ ಪೂರ್ಣಗೊಂಡ ವರದಿಯನ್ನು ಸ್ವೀಕರಿಸದಿರುವುದು ಹಾಗೂ ಸಂಬಂಧಿಸಿದ ಸಂಸ್ಥೆಯೊಂದಿಗೆ ಜಂಟಿ ದಾಸ್ತಾನು (Joint Inventory) ಪೂರ್ಣಗೊಳಿಸಿ ಆಸ್ತಿಗಳನ್ನು ಕವಿಪ್ರನಿನಿಗೆ ಹಸ್ತಾಂತರಿಸದೇ ಇರುವುದು ಆಸ್ತಿಗಳನ್ನು ವಿಳಂಬವಾಗಿ ಬಂಡವಾಳೀಕರಣಗೊಳಸಲು ಕಾರಣವಾಗಿರುತ್ತದೆ.

2. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ. ಉಲ್ಲೇಖಿತ ಸುತ್ತೋಲೆಗಳಲ್ಲಿ ಆಸ್ತಿ ಬಂಡವಾಳೀಕರಣಗೊಳಿಸುವುದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ತಿಳಿಸಲಾಗಿತ್ತು.

**ಅ. ಉಲ್ಲೇಖ-1 ದಿನಾಂಕ 21.06.2007 ರ ಪತ್ರದಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.**

*"As per the provisions of Income Tax, depreciation can be claimed for one whole year for the assets categorized upto September (i.e. within 180 days from 1st of April) and for half year for the assets categorized after September (i.e. after 180 days from the beginning of the year).*

*If the assets are correctly categorized and if the date of categorization falls within 180 days from the beginning of the year, KPTCL can claim depreciation for the entire year on such assets, which is very beneficial to KPTCL as it reduces the Income Tax liability."*

**ಆ. ಉಲ್ಲೇಖ-2 ದಿನಾಂಕ 03.02.2009 ರ ಪತ್ರದಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.**

*"The Accounting Units should understand the disadvantages of non-categorization of commissioned works. As the Assets starts earning depreciation from the month of commissioning of the assets, depreciation will not be provided on the assets, if the commissioned works are not categorized in the month of commissioning itself. As such, Depreciation on such assets is not booked in the accounts and hence the same will not be reckoned by KERC for fixation of Transmission Tariff. To that extent, our Internal Resources, which is the main source for meeting debt-servicing obligation, gets depleted.*

*It is also brought down in the circular that "it should be noted by the Accounting Units that non- receipt of bills/completion report is not a valid reason for withholding categorization of completed works, a provision should be made for an amount as per contract."*

**ಇ. ಉಲ್ಲೇಖ-3 ದಿನಾಂಕ 30.11.2019 ರ ಪತ್ರದಲ್ಲಿ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.**

*The entire process of taking joint inventory, handing it over to the concerned TL&SS Division and Asset categorized in Accounts section shall be completed within 45 days from the date of Interconnection of line to KPTCL Grid".*

3. ಈ ಮೇಲಿನ ಎಲ್ಲಾ ಸುತ್ತೋಲೆಗಳಲ್ಲಿ ಕಾಲಕಾಲಕ್ಕೆ ಆಸ್ತಿ ಬಂಡವಾಳೀಕರಿಸುವ ಬಗ್ಗೆ ಸವಿಸ್ತಾರವಾಗಿ ಸ್ಪಷ್ಟೀಕರಣ ನೀಡಿದಾಗ್ಯೂ ಸಹಾ ಕವಿಪ್ರನಿನಿಯ ಲೆಕ್ಕಘಟಕಗಳಲ್ಲಿ ನಿಗಮವು ನೀಡಿರುವ ಸೂಚನೆಗಳನ್ನು ಪಾಲಿಸುತ್ತಿಲ್ಲದಿರುವುದು ನಿಗಮಕ್ಕೆ ಆರ್ಥಿಕ ನಷ್ಟವನ್ನುಂಟುಮಾಡುತ್ತಿದೆ ಇನ್ನು ಮುಂದೆ ಕಾಮಗಾರಿಗಳು ಪೂರ್ಣಗೊಂಡೊಡನೆ ಆಸ್ತಿ ಬಂಡವಾಳೀಕರಿಸಲು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಗಿರುತ್ತದೆ.

4. ವಿಳಂಬ ಆಸ್ತಿ ಬಂಡವಾಳೀಕರಣದಿಂದಾಗುವ ಪರಿಣಾಮಗಳು ಈ ಕೆಳಕಂಡಂತಿರುತ್ತದೆ;

ಅ. ಕವಿಪ್ರನಿನಿಯು Ind AS ಲೆಕ್ಕನೀತಿಗಳನ್ವಯ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿದ್ದು Ind AS-08 ರ ನಿಯಮಗಳಂತೆ ಹಿಂದಿನ ಆರ್ಥಿಕ ವರ್ಷಗಳ ಆಸ್ತಿ ಬಂಡವಾಳೀಕರಣದ ಸುಮಾರು 423.27 ಕೋಟಿಗಳಷ್ಟು ಬಿಲ್ ಸ್ವೀಕರಿಸಿ ಆರ್ಥಿಕ ವರ್ಷ 2020-21ನೇ ಸಾಲಿನಲ್ಲಿ ಲೆಕ್ಕೀಕರಿಸಲಾಗಿರುವುದರಿಂದ ಪ್ರತಿ ವರ್ಷವು ಕವಿಪ್ರನಿನಿಯ ಅಂಕಿ ಅಂಶಗಳನ್ನು ಪುನರುಚ್ಚರಿಸಲಾಗುತ್ತಿದೆ (**ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ**). ವಿಳಂಬ ಆಸ್ತಿ ಬಂಡವಾಳೀಕರಣದಿಂದಾಗಿ ಸುಮಾರು 423.27 ಕೋಟಿಗಳಷ್ಟು ಮೊತ್ತವನ್ನು ಪುನರುಚ್ಚರಿಸಲಾಗಿದ್ದು ಇದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.

ಆ. ಆಸ್ತಿಗಳು ಕಾರ್ಯಾರಂಭಗೊಂಡ ತಿಂಗಳನಲ್ಲಿಯೇ ಬಂಡವಾಳಕರಣಗೊಳಸದೇ ಇರುವುದರಿಂದ ಆಸ್ತಿಗಳ ಮೇಲೆ ಸವಕಳಿಯನ್ನು ಒದಗಿಸಲಾಗುವುದಿಲ್ಲ. ಅಂತೆಯೇ, ಅಂತಹ ಆಸ್ತಿಗಳ ಮೇಲಿನ ಸವಕಳಿಯನ್ನು ಖಾತೆಗಳಲ್ಲಿ ಲೆಕ್ಕೀಕರಿಸದಿಲ್ಲದಿರುವುದರಿಂದ ಪ್ರಸರಣ ಜಕಾತಿಯನ್ನು (Transmission Tariff) ನಿಗದಿಪಡಿಸಲು ಕೆ.ಇ.ಆರ್.ಸಿ ಯಿಂದ ಸವಕಳಿ ವೆಚ್ಚಗಳನ್ನು ಪರಿಗಣಿಸಲಾಗುತ್ತಿಲ್ಲದಿರುವುದರಿಂದ ಆಂತರಿಕ ಸಂಪನ್ಮೂಲಗಳ ಕೊರತೆ ಉಂಟಾಗುವ ಜೊತೆಗೆ ಆರ್ಥಿಕ ನಷ್ಟವಾಗುತ್ತಿದೆ.

ಇ. ಮುಂದುವರೆದು, ನಿಗದಿತ ಸಮಯದಲ್ಲಿ ಆಸ್ತಿಗಳ ಮೇಲಿನ ಸವಕಳಿಯನ್ನು ವಿಧಿಸುತ್ತಿಲ್ಲದಿರುವುದರ ಪರಿಣಾಮವಾಗಿ ಆದಾಯ ತೆರಿಗೆ ನಿಯಮಗಳ ಪ್ರಕಾರ ಹಿಂದಿನ ವರ್ಷಗಳ ಸವಕಳಿ ವೆಚ್ಚದ (Prior Period Expenditure) ಮೇಲೆ ವಿನಾಯಿತಿ ಪಡೆಯಲು ಆದಾಯ ತೆರಿಗೆ ಇಲಾಖೆಯು ಅನುಮತಿಸದಿರುವುದರಿಂದ ಕವಿಪ್ರನಿನಿಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ.

5. ಕವಿಪ್ರನಿನಿಯ ಆಸ್ತಿಗಳ ಬಂಡವಾಳೀಕರಣದ ಮೇಲಿನ ಲೆಕ್ಕ ಪರಿಶೋಧಕರ ಆಕ್ಷೇಪಣೆಯನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಹಾಗೂ Special condition of contract ಕಂಡಿಕೆ 5.6.2 (**ಅನುಬಂಧ-2**) ರ ಅನ್ವಯ ಗುತ್ತಿಗೆದಾರರು ವಿಳಂಬ ಮಾಡದೇ ಹುಂಡಿಗಳನ್ನು ಸಲ್ಲಿಸಲು ಕ್ರಮಕೈಗೊಳ್ಳಲು ಮತ್ತು ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ-19/345/85-86 ದಿನಾಂಕ: 30.11.2019 ಮೇರೆಗೆ ಆಸ್ತಿಗಳನ್ನು ವಿಳಂಬವಿಲ್ಲದೆ ಕಾಮಗಾರಿಗಳು ಕಾರ್ಯಗತಗೊಂಡೊಡನೆ ಲೆಕ್ಕಶಾಖೆಗೆ ಮಾಹಿತಿ ನೀಡಲು ಹಾಗೂ ಲೆಕ್ಕ ಶಾಖೆಯವರು ಮಾಹಿತಿ ಪಡೆದು ವಿಳಂಬವಿಲ್ಲದೆ ಬಂಡವಾಳೀಕರಣಗೊಳಿಸಲು ಕೋರಿದೆ. ಮುಂದೆ ಇಂತಹ ಸಂದರ್ಭಗಳು ಉದ್ಭವಿಸಿದಲ್ಲಿ ಸಂಬಂಧಿಸಿದ ಮುಖ್ಯ ಇಂಜಿನಿಯರ್(ವಿ) / ಲೆಕ್ಕನಿಯಂತ್ರಣಾಧಿಕಾರಿ ಮತ್ತು ಸಂಬಂಧಪಟ್ಟ ಅಧಿಕಾರಿ/ನೌಕರರನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಈ ಮೂಲಕ ತಿಳಿಸಿದೆ.

**"ನಿರ್ದೇಶಕರು (ಹಣಕಾಸು) ರವರಿಂದ**
**ಅನುಮೋದಿಸಿದೆ"**

**ತಮ್ಮ ವಿಶ್ವಾಸಿ,**

**ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)**
**ಕವಿಪ್ರನಿನಿ.**

**ಪ್ರತಿಗಳು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1. ಆರ್ಥಿಕ ಸಲಹೆಗಾರರು (ಆಂ.ಪ) / (ಪಿ&ಜಿ)/(ಎನ್.ಡಿ.ಸಿ.ಪಿ.ಎಸ್), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/(ಸಿಬ್ಬಂದಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
3. ಮುಖ್ಯ ಇಂಜಿನಿಯರ್(ವಿದ್ಯುತ್), ಟಿ & ಪಿ/ಎಸ್.ಎಲ್.ಡಿ.ಸಿ/ಟಿ.ಬಿ.ಸಿ, ಕವಿಪ್ರನಿನಿ,

SE(IT)

4. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ/ ಟಿ & ಪಿ/ ಎಸ್.ಎಲ್.ಡಿ.ಸಿ /ಟಿ.ಬಿ.ಸಿ/ (ಲೆ. ಪಿಂ & ಮುಂ) (ಹಣಕಾಸು)/(ಕಾ & ತೆ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ) / ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ, ಕಾಮಗಾರಿ ವೃತ್ತ / ನಿರ್ವಹಣಾ ವೃತ್ತ / ಕಾಮಗಾರಿ ಮತ್ತು ಪ್ರಸರಣ ವೃತ್ತ / ಆರ್.ಟಿ ವೃತ್ತ / ಟಿ.ಬಿ.ಸಿ ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ)(ಐ.ಟಿ) ಗಣಕ ಶಾಖೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕವಿಪ್ರನಿನಿಯ ಜಾಲತಾಣದ www.kptcl.karnataka.gov.in-->eprasaranna ದಲ್ಲಿ ಪ್ರಕಟಿಸಲು ಕೋರಿದೆ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಕವಿಪ್ರನಿನಿ, ಬೃಹತ್ ಕಾಮಗಾರಿ ವಿಭಾಗ/ಟಿ.ಎಲ್ & ಎಸ್.ಎಸ್ ವಿಭಾಗ / ಇ.ಹೆಚ್.ವಿ ಕೇಬಲ್ ವಿಭಾಗ, ಕವಿಪ್ರನಿನಿ.
9. ವ್ಯವಸ್ಥಾಪಕರು(ನಗದು ಮತ್ತು ಲೆಕ್ಕಗಳು)/(ಆಂ.ನಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು ಮಾಹಿತಿಗಾಗಿ:**

1. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ)/(ಹಣಕಾಸು)/(ಆ ಮತ್ತು ಮಾಸಂ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಬೆಂಗಳೂರು.